**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 18-04-2024.**

**ಪಾಟೀ ಸವಾಲು - ಪ್ರತಿವಾದಿಗಳ ಪರ ವಕೀಲರಿಂದ :**

**1)** ನಾನು 10 ನೇ ತರಗತಿ ಓದಿರುತ್ತೇನೆ. ನಮ್ಮ ತಂದೆ ಅನಕ್ಷರಸ್ಥರು. ನಮ್ಮ ತಂದೆಗೆ ಹೃದಯ ಚಿಕಿತ್ಸೆಯಾಗಿದ್ದು, ಅವರು ಓಡಾಡಲು ಆರೋಗ್ಯ ಸರಿಯಿಲ್ಲ. ಈ ದಾವಾಸ್ವತ್ತಿನ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇದೆ. ನಾನು 1988 ರಲ್ಲಿ ಜನಿಸಿರುತ್ತೇನೆ. ದಿ.01-11-1965 ರ ಕ್ರಯಪತ್ರದ ವ್ಯವಹಾರದ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ. ಈ ದಾವೆಯ 1 ನೇ ಪ್ರ 2 ವಾದಿಯ ವಿಳಾಸ ಚಿಕ್ಕಬಳ್ಳಾಪುರ ಆಗಿರುತ್ತದೆ. ಚಿಕ್ಕಬಳ್ಳಾಪುರದಲ್ಲಿ ಚಾಮರಾಜಪೇಟೆ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ವಾದಿಯ ತಂದೆಯ ಹೆಸರು ಮುನಿಯಪ್ಪ. ಮುನಿಯಪ್ಪ ಮತ್ತು ಅವರ ತಮ್ಮ ನಾರಾಯಣಪ್ಪ ಇಬ್ಬರೂ ಸಹೋದರರು. ಮುನಿಯಪ್ಪ ಅವರಿಗೆ ಒಟ್ಟು ಐದು ಜನ ಮಕ್ಕಳು. ಅವರು ರಾಜಣ್ಣ, ಆಂಜಿನಪ್ಪ, ತಿಮ್ಮಕ್ಕ, ಮುನಿತಾಯಮ್ಮ ಮತ್ತು ಇನ್ನೊಬ್ಬರು ಆಗಿರುತ್ತಾರೆ. ಸದರಿ ಇನ್ನೊಬ್ಬರು ಮುನಿಯಪ್ಪ ಅವರ ಮಗಳು ಆಗಿರುತ್ತಾರೆ. ಮೇಲೆ ಹೇಳಿದ ನಾರಾಯಣಪ್ಪ ಅವರ ಮೂರು ಜನ ಗಂಡು ಮಕ್ಕಳು ಹಾಗೂ ಒಬ್ಬ ಮಗಳು. ಸದರಿ ಮೂರು ಜನ ಗಂಡುಮಕ್ಕಳ ಹೆಸರು ರಾಜಣ್ಣ, ಪಿಳ್ಳಪ್ಪ ಹಾಗೂ ಇನ್ನೊಬ್ಬರು ಆಗಿರುತ್ತಾರೆ. ಅವರ ಹೆಸರು ನೆನಪಿಲ್ಲ. ಮುನಿಯಪ್ಪ ಮತ್ತು ನಾರಾಯಣಪ್ಪ ಅವರ ಜೀವಿತಾವಧಿಯಲ್ಲಿ ಯಾವುದೇ ವಿಭಾಗ ಮಾಡಿಕೊಂಡಿರುವುದಿಲ್ಲ. ಮುನಿಯಪ್ಪ ಅವರ ಮರಣಾನಂತರ 1997 ರಲ್ಲಿ ವಿಭಾಗ ಆಗಿರುತ್ತದೆ. ಆ ಬಗ್ಗೆ ಐ.ಹೆಚ್.ಸಿ. ನಡಾವಳಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆ ದಾಖಲಿಸುವ ಪೂರ್ವದಲ್ಲಿ ಈ ದಾವೆಯ ವಾದಿ ಅಸಲು ದಾವಾ ಸಂಖ್ಯೆ 763/2007 ನ್ನು ಪಿಳ್ಳಮ್ಮ ಮತ್ತು ಲಕ್ಷ್ಮಯ್ಯ ಅವರ ಮೇಲೆ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ತಾವು ದಾವಾಸ್ವತ್ತಿನ ಮಾಲೀಕರು ಹಾಗೂ ಪ್ರತಿವಾದಿಗಳ ವಿರುದ್ಧ

ತಡೆಯಾಜ್ಞೆ ನೀಡಿ ಎಂದು ಕೋರಿ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ವಕೀಲರು ಸರಿಯಾಗಿ ನೋಡಿಕೊಳ್ಳದೇ ಇರುವುದರಿಂದ ನ್ಯಾಯಾಲಯದ ಅನುಮತಿಯನ್ನು ಪಡೆದು ವಾಪಸ್ಸು ಪಡೆದಿರುತ್ತೇವೆ. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು ಮಾಹಿತಿ ನೀಡಿದಂತೆ ನಮ್ಮ ವಕೀಲರು ತಯಾರಿಸಿರುತ್ತಾರೆ. ನಮ್ಮ ತಂದೆ ಅಸಲು ದಾವಾಸಂಖ್ಯೆ 763/2007 ನ್ನು ವಾಪಸ್ಸು ಪಡೆಯುವಾಗ ಕೇವಲ ಸ್ವಾಧೀನಕ್ಕೆ ಸಂಬಂಧಿಸಿದಂತೆ ಮಾತ್ರ ದಾವೆ ಸಲ್ಲಿಸುವಂತೆ ಅನುಮತಿ ಕೋರಿ ಉಳಿದ ಪ್ರಾರ್ಥನೆಗಳನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿ.16-09-2015 ರಂದು ನ್ಯಾಯಾಲಯದವರು ಕೇವಲ ಸ್ವಾಧೀನತೆಯನ್ನು ಮಾತ್ರ ದಾವೆ ದಾಖಲಿಸಲು ಅನುಮತಿ ನೀಡಿ ಸದರಿ ದಾವೆಯನ್ನು ವಜಾಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. 2015 ರಲ್ಲಿ ನಮ್ಮ ತಂದೆಯ ಆರೋಗ ಚೆನ್ನಾಗಿತ್ತು ಎಂದರೆ ಸರಿ. ಸದರಿ ದಾವೆಯನ್ನು ವಾಪಸ್ಸು ಪಡೆದ ಒಂದು ತಿಂಗಳಿಗೆ ಅವರಿಗೆ ಹೃದಯಾಘಾತ ಆಗಿರುತ್ತದೆ. ನಮ್ಮ ತಂದೆಯ ಅನಾರೋಗ್ಯದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. 2015 ರಲ್ಲಿ ಸದರಿ ದಾವೆಯನ್ನು ವಾಪಸ್ಸು ಪಡೆದ ತಕ್ಷಣ ಹೊಸ ದಾವೆ ದಾಖಲಿಸಲು ನಮ್ಮ ತಂದೆಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಸುಮಾರು ಎರಡು ವರ್ಷದ ಅವಧಿಯವರಗೆ ಆರೋಗ್ಯ ಸರಿಯಿರಲಿಲ್ಲ. ತದನಂತರ ಅವರಿಗೆ ಬೇರೆ ದಾವೆ ದಾಖಲಿಸಲು ತೊಂದರೆ ಇರಲಿಲ್ಲ ಎಂದರೆ ಅವರಿಗೆ ಓಡಾಡಲು ಆಗುತ್ತಿರಲಿಲ್ಲ. ಸದರಿ ದಾವೆಯಲ್ಲಿ ನಮ್ಮ ತಂದೆ 1 ನೇ ಪ್ರತಿವಾದಿಯ ಗಂಡನಿಂದ ಸಾಲವನ್ನು ಪಡೆದುಕೊಂಡಿದ್ದು, ಸದರಿ ವ್ಯವಹಾರದ ಬಗ್ಗೆ ಕ್ರಯಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾಸಂಖ್ಯೆ 763/2007 ರಲ್ಲಿ ನಮ್ಮ ತಂದೆ ವಾದಪತ್ರದಲ್ಲಿ ನಮೂದಿಸಿದ ಎಲ್ಲಾ ವಿಷಯಗಳು ಸರಿಯಿರಲಿಲ್ಲ. ಸದರಿ ದಾವೆಯಲ್ಲಿ ನಾವು ಕೇಳಿದ ಪ್ರಾರ್ಥನೆ ಸರಿಯಿರಲಿಲ್ಲ. ವಾದಪತ್ರದಲ್ಲಿ ಹೇಳಿದ ಸಂಗತಿಗಳೂ ಸಹ ಸರಿಯಿರಲಿಲ್ಲ. ಸದರಿ ದಾವೆಯಲ್ಲಿ ತಿದ್ದುಪಡಿಗೆ ಅರ್ಜಿ ಸಲ್ಲಿಸಲು

ತೊಂದರೆ ಇರಲಿಲ್ಲ ಎಂದರೆ ನಮ್ಮ ಹಿಂದಿನ ವಕೀಲರು ಹೇಗೆ ಹೇಳಿದ್ದಾರೆ ಎಂದು ನಮಗೆ ಗೊತ್ತಾಗಲಿಲ್ಲ ಎಂದು ನುಡಿಯುತ್ತೇನೆ. ನಾವು ಹೇಳಿರುವುದು ಒಂದು ರೀತಿಯಾದರೆ ನಮ್ಮ ವಕೀಲರು ಬೆರಳಚ್ಚು ಮಾಡಿರುವುದು ಬೇರೆ ರೀತಿ ಆಗಿತ್ತು. ಸದರಿ ವಿಚಾರ ಬೇರೆ ವಕೀಲರ ಮೂಲಕ ತಿಳಿದುಬಂದಾಗ ಸದರಿ ದಾವೆಯನ್ನು ನಾವು ವಾಪಸ್ಸು ಪಡೆದಿರುತ್ತೇವೆ. ಆ ಬಗ್ಗೆ ನಮ್ಮ ವಕೀಲರ ವಿರುದ್ಧ ಕ್ರಮ ಜರುಗಿಸಿರುತ್ತೇವೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳು ಒದಗಿಸಲು ಯಾವುದೇ ತೊಂದರೆ ಇಲ್ಲ. ಅಸಲು ದಾವಾಸಂಖ್ಯೆ 763/2007 ರಲ್ಲಿ ನಮ್ಮ ತಂದೆ ಸರಿಯಾದ ವಿಷಯಗಳನ್ನು ಹೇಳಿದ್ದು, ಈಗ ವಕೀಲರ ಮೇಲೆ ವಿನಾಕಾರಣ ಆರೋಪ ಮಾಡಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಕಾನೂನನ್ನು ದುರ್ಬಳಕೆ ಮಾಡಿ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಿ.29-07-2021 ರ ಆದೇಶವನ್ನು ಪ್ರಶ್ನೆ ಮಾಡಿ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಜಿಲ್ಲಾ ನ್ಯಾಯಾಲಯವು ಮಾಡಿದ ಆದೇಶದ ವಿರುದ್ಧ ನಾವು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ದಾವಾಆಸ್ತಿಯ ಕಂದಾಯ ಎಂಟ್ರಿಗಳ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಚಾಲ್ತಿಯಲ್ಲಿದೆ ಎಂದರೆ ಸರಿ. ಉಪವಿಭಾಗಾಧಿಕಾರಿಗಳು ಹೊರಡಿಸಿದ ಆದೇಶ ದಿ.28-08-2009 ನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಲಾಗಿದೆ ಎಂದರೆ ಸರಿ. ನಿ.ಪಿ.46 ರಲ್ಲಿ 1 ನೇ ಪ್ರತಿವಾದಿಯ ವಿಳಾಸವನ್ನು ಚಾಮರಾಜಪೇಟೆ, ಬೆಂಗಳೂರು ಎಂದು ನಮೂದಿಸಿದ್ದೇವೆ ಎಂದರೆ ಸರಿ. 1 ನೇ ಪ್ರತಿವಾದಿ ಚಿಕ್ಕಬಳ್ಳಾಪುರದಲ್ಲಿ ವಾಸವಿದ್ದರೂ ಸಹ ಅವರ ವಿಳಾಸವನ್ನು ಬೆಂಗಳೂರು ಎಂದು ಸುಳ್ಳು ತೋರಿಸಿ ಸದರಿ ಮೆಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಗಮನಿಸಿ ಮಾನ್ಯ ಉಚ್ಛ ನ್ಯಾಯಾಲಯದವರು ನಿ.ಪಿ.46 ರ ಆದೇಶವನ್ನು ಸ್ಟೇ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ರಿಟ್ ಅರ್ಜಿ ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**